ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1202

ಉತ್ತರಿಸಬೇಕಾದ ದಿನಾಂಕ : 16.03.2021

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಇರುವ ಒಟ್ಟು ನಂದಿನಿ ಬೂತ್‌ಗಳು ಎಷ್ಟು; ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಒಟ್ಟು ನಂದಿನಿ ಬೂತ್ ಗಳೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)</td><td>ಬೀದರ್ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 50 ಸಂಖ್ಯೆ ಪಾರ್ಲರ್ ಇದ್ದು, ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ತಾಲ್ಲೂಕಿನ ಹೆಸರು</th><th>ಬೂತ್ ಸಂಖ್ಯೆ</th></tr>
<tr><td>1</td><td>ಬೀದರ್</td><td>25</td></tr>
<tr><td>2</td><td>ಔರದ್</td><td>05</td></tr>
<tr><td>3</td><td>ಭಾಲ್ಕಿ</td><td>10</td></tr>
<tr><td>4</td><td>ಹುಮನಾಬಾದ್</td><td>06</td></tr>
<tr><td>5</td><td>ಬಸವಕಲ್ಯಾಣ</td><td>04</td></tr>
<tr><td colspan="2">ಒಟ್ಟು</td><td>50</td></tr>
</table>
</td></tr>
<tr><td>ಆ)</td><td>ಬೀದರ್ ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಂದಿನಿ ಬೂತ್/ಪಾರ್ಲರ್‌ಗಳನ್ನು ಹೊಸದಾಗಿ ಪ್ರಾರಂಭಿಸಲು ಇರುವ ಮಾನದಂಡಗಳೇನು; ಫ್ರಾಂಚೈಸಿಯನ್ನು ಪಡೆಯುವವರಿಗೆ ಸಿಗುವ ಸೌಲಭ್ಯಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td>1. ಜನಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ರಿಟೇಲ್ ದರದಲ್ಲಿ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ.

2. ಸ್ಥಳೀಯ ಪ್ರದೇಶದಲ್ಲಿರುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನ ಮಾರಾಟ ಮಾಡಲು ಆಸಕ್ತರನ್ನು ಗುರುತಿಸಲಾಗುವುದು, ಹಾಗೂ ಕೆಲವೊಮ್ಮೆ ನೇರವಾಗಿ ಆಸಕ್ತರು ಅರ್ಜಿಗಳನ್ನು ನೀಡಿದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುವುದು.

3. ಅರ್ಜಿದಾರರ ಮಾರಾಟ ಕೌಶಲ್ಯತೆ ಸ್ಥಳೀಯ ಜನಸಾಮಾನ್ಯರೊಂದಿಗೆ ಒಡನಾಟ ಹಾಗೂ ಬಂಡವಾಳವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ನೇಮಕ ಮಾಡಲಾಗುವುದು.

4. ಆಸಕ್ತರು ಆಯ್ದ ಸ್ಥಳಗಳಲ್ಲಿ ಬಂಡವಾಳ ಹೂಡಿ ಇತರೆ ಉತ್ಪನ್ನಗಳೊಂದಿಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗುತ್ತದೆ.

5. ಪಾರ್ಲರ್/ಫ್ರಾಂಚೈಸಿಗಳಿಗೆ ಬ್ರಾಂಡಿಂಗ್‌ನ್ನು ಮಾಡಿಸುವುದು ಹಾಗೂ ರಿಯಾಯತಿ ದರದಲ್ಲಿ ಫ್ರೀಜರ್ ಮತ್ತು ಕೂಲರ್ ವ್ಯವಸ್ಥೆ ಹಾಲು ಒಕ್ಕೂಟಗಳು ಹಾಗೂ ಕೆ.ಎಂ.ಎಫ್ ಸಂಸ್ಥೆಯಿಂದ ಮಾಡಲಾಗುವುದು.</td></tr>
</table>

ಇ)	ನಂದಿನಿ ಬೂತ್/ಪಾರ್ಲರ್ ಗಳನ್ನು ಎಷ್ಟು ಕಿ.ಮೀ.,ಗೆ ಅಂತರದಲ್ಲಿ ನಗರ/ಗ್ರಾಮೀಣ ಭಾಗದಲ್ಲಿ ಸ್ಥಾಪಿಸಲು ಅವಕಾಶವಿದೆ; ಇದಕ್ಕೆ ಇರುವ ಮಾನದಂಡಗಳೇನು; (ವಿವರ ನೀಡುವುದು)	ನಗರ ಪ್ರದೇಶಗಳಲ್ಲಿ ಒಂದು ಅಥವಾ ಎರಡು ಕಿ.ಮೀ.ಗೆ ಒಂದರಂತೆ ಆಯಾ ಸ್ಥಳದ ಬೇಡಿಕೆ ಮತ್ತು ಜನಸಂಖ್ಯೆ ಆಧಾರದ ಮೇಲೆ ಬೂತ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಬೇಡಿಕೆ/ಅವಕಾಶಗಳ ಅನುಸಾರವಾಗಿ ನಂದಿನಿ ಪಾರ್ಲರ್‌ಗಳನ್ನು ಸ್ಥಾಪಿಸಲು ಅವಕಾಶವಿದ್ದು, ಅಂತರವನ್ನು ನಿಗದಿಪಡಿಸಿರುವುದಿಲ್ಲ.
ಈ)	ಈ ನಂದಿನಿ ಬೂತ್/ಪಾರ್ಲರ್ ಗಳಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು? (ಬೂತ್ /ಪಾರ್ಲರ್‌ಗಳವಾರು ತಾಲ್ಲೂಕುವಾರು ಮಾಹಿತಿ ನೀಡುವುದು)	ನಂದಿನಿ ಬೂತ್/ಪಾರ್ಲರ್‌ಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಇರುವುದಿಲ್ಲ. ಕಲಬುರಗಿ ಹಾಲು ಒಕ್ಕೂಟಕ್ಕೆ ನಂದಿನಿ ಬೂತ್/ ಪಾರ್ಲರ್‌ಗಳ ಮಾಹೆಯಾನ ರೂ.32.40 ಲಕ್ಷ ವಹಿವಾಟಿನಲ್ಲಿ ಶೇ.10 ರಷ್ಟು ಲಾಭವಿರುತ್ತದೆ. ನಂದಿನಿ ಬೂತ್ / ಪಾರ್ಲರ್‌ಗಳವಾರು ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕಿನ ಹೆಸರು	ಬೂತ್ ಸಂಖ್ಯೆ	ವಹಿವಾಟು	ಲಾಭ
1	ಬೀದರ್	25	584.5	5.85
2	ಔರದ್	05	102	1.02
3	ಭಾಲ್ಕಿ	10	218	2.18
4	ಹುಮನಾಬಾದ್	06	151	1.51
5	ಬಸವಕಲ್ಯಾಣ	04	53.3	0.53
ಒಟ್ಟು		**50**	**1108.8**	**11.09**

ಕಡತ ಸಂಖ್ಯೆ: ಸಿಒ 59 ಸಿಸಿಬಿ 2021

ಎಸ್.ಟಿ. ಸೋಮಶೇಖರ್

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.